**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಮ್.ಫ್.ಸಿ ಸಿಂದಗಿ**

**ಸಿ.ಸಿ ನಂಃ 1286/2023**

ಪಿರ್ಯಾದುದಾರರು ಃ ಸರಕಾರದ ಪರವಾಗಿ ಆಲಮೇಲ ಪಿ.ಎಸ್

**ವಿರುದ್ಧ**

ಆರೋಪಿಃ ಶಿವಪ್ಪ ತಂ.ಬಳಗಾರಿ ಮಾಲ್ದ ಮತ್ತು ಇತರರು ,

**ದೋಷಾರೋಪಣೆ**

**ಶ್ರೀ ನಾಗೇಶ ಕೆ. ಮೊಗೇರ.,ಬಿ.ಕಾಂ, ಎ.ಎಲ್.ಎಮ್**
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು.** ಆದ ನಾನು, ಆರೋಪಿಯರಾದ

1. ಶಿವಪ್ಪ ತಂ.ಬಳಗಾರಿ ಮಾಲ್ದ
   ವಯಾಃ 44 ವರ್ಷ, ಸಾಃ ಬಳಗಾನೂರ,

2. ಚಂದ್ರಾಮ @ ಚಂದಪ್ಪ ಮಾಲ್ದ,
   ವಯಾಃ 55 ವರ್ಷ, ಸಾಃ ಬಳಗಾನೂರ,

3. ನಾಗಪ್ಪ ತಂ.ಬಳಗಾರಿ ಮಾಲ್ದ
   ವಯಾಃ 48 ವರ್ಷ, ಸಾಃ ಬಳಗಾನೂರ,

4. ಭೀರಪ್ಪ ತಂ.ಚಂದ್ರಾಮ ಮಾಲ್ದ
   ವಯಾಃ 22 ವರ್ಷ, ಸಾಃ ಬಳಗಾನೂರ,

5. ಮಾಳಪ್ಪ ತಂ. ಜಟ್ಟೆಪ್ಪ ಮಾಲ್ದ
   ವಯಾಃ 26 ವರ್ಷ,

ನಿಮ್ಮ ಮೇಲೆ ಈ ಕೇಳಗಿನಂತೆ ದೋಷಾರೋಪಣೆಯನ್ನು ಮಾಡುತ್ತಿದ್ದೇನೆ.

ಮೊದಲನೇಯದಾಗಿ ಆಲಮೇಲ ಪೋಲಿಸ ಠಾಣೆ ವ್ಯಾಪ್ತಿಯ ಬಳಗಾನೂರು ಗ್ರಾಮದಲ್ಲಿ ಪಿರ್ಯಾದುದಾರರ ಜಮೀನಿನ ಪತ್ರಾಸ ಶೆಡ್ಡಿನಲ್ಲಿ ದಿನಾಂಕ 20.04.2022 ರಂದು

ಬೆಳ್ಳಿಗೆ 11 ಗಂಟೆಯ ಸುಮಾರಿಗೆ ಆರೋಪಿತರಾದ ನೀವು ಗೈರ ಕಾಯ್ದೆಶೀರ ಮಂಡಳಿಯಾಗಿ ಬಂದಿದ್ದು, ಈ ಮೂಲಕ ಭಾ.ದಂ.ಸಂ. 143 ಸಹ ಕಲಂ 149 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ?

ಎರಡನೇಯದಾಗಿ ನೀವು ಆರೋಪಿತರು ಸದರಿ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಗೈರ ಕಾಯ್ದೆಶೀರ ಮಂಡಳಿಯಾಗಿ ಬಂದು ಪಿರ್ಯಾದುದಾರರ ಜೊತೆ ಜಗಳ ತೆಗೆದಿದ್ದು ಈ ಮೂಲಕ ಭಾ.ದಂ.ಸಂ. 147 ಸಹ ಕಲಂ 149 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ?

ಮೂರನೇಯದಾಗಿ ನೀವು ಆರೋಪಿತರು ಸದರಿ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಗೈರ ಕಾಯ್ದೆಶೀರ ಮಂಡಳಿಯಾಗಿ ಬಂದು ಪಿರ್ಯಾದುದಾರ ಜೊತೆ ಜಗಳ ತೆಗೆದು ಪತ್ರಾಸ ಶೆಡ್ಡಿನಲ್ಲಿರುವ ಅಡುಗೆ ಸಾಮಾನುಗಳನ್ನು ಹಾಳು ಮಾಡಿ, ಪತ್ರಾಸ ಕಿತ್ತುಹಾಕಿದ್ದು ಮತ್ತು ಸುಮಾರು 8 ವರ್ಷಗಳಿಂದ ಆರೋಪಿತರಾದ ನೀವು ಪಿರ್ಯಾದುದಾರರಿಗೆ ಮತ್ತು ಅವರ ಮಕ್ಕಳಿಗೆ ಹಿಂಸೆ ಮಾಡುತ್ತಾ ಬಂದಿದ್ದು ಈ ಮೂಲಕ ಭಾ.ದಂ.ಸಂ. 498 ಎ ಸಹ ಕಲಂ 149 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ?

ನಾಲ್ಕನೇಯದಾಗಿ ಸದರಿ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಪಿರ್ಯಾದುದಾರರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು ಈ ಮೂಲಕ ಭಾ.ದಂ.ಸಂ. 504 ಸಹ ಕಲಂ 149 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ?

ಐದನೇಯದಾಗಿ ಸದರಿ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಪಿರ್ಯಾದುದಾರರಿಗೆ ಈ ಪತ್ರಾಸ ಶೆಡ್ಡನಲ್ಲಿ ಹೇಗೆ ಜೀವನ ಮಾಡುತ್ತಿ, ಈ ಪತ್ರಾಸ ಶೆಡ್ಡಿಗೆ ಬೆಂಕಿ ಹಚ್ಚಿ ಸುಡುತ್ತೇವೆ ಎಂದು ಜೀವ ಬೆದರಿಕೆ ಹಾಕಿದ್ದು ಈ

ಮೂಲಕ ಭಾ.ದಂ.ಸಂ. 506 ಸಹ ಕಲಂ 149 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ?

ಈ ಮೇಲಿನ ಆರೋಪಣೆಗಳಿಗೆ ಈ ನ್ಯಾಯಾಲಯದ ಮುಂದೆ ನೀವು ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತೇನೆ.

21.06.2023

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿ, ಸಿಂದಗಿ.